# ಕರ್ನಾಟಕ ಪರೀಕ್ಷಾ ಪ್ರಾಧಿಕಾರ
# Karnataka Examinations Authority

ಸಂಖ್ಯೆ: ಇಡಿ/ಕೆಇಎ/ಪತ್ರಿಕಾ ಪ್ರಕಟಣೆ/2021 ದಿನಾಂಕ: 13-04-2022

ಪತ್ರಿಕಾ ಪ್ರಕಟಣೆ

**ಮಾಪ್-ಅಪ್ ಸುತ್ತಿನ ಸೀಟು ಹಂಚಿಕೆ – ಯುಜಿ ಆಯುಷ್ ಕೋರ್ಸುಗಳು**

**ಎ. ಯುಜಿ ಆಯುಷ್ ಕೋರ್ಸುಗಳಿಗೆ 2021ನೇ ಸಾಲಿಗೆ** ಕನಿಷ್ಟ ಅರ್ಹತೆಯ ಅಂಕಗಳನ್ನು ಪರಷ್ಕರಿಸಿರುವ ಹಿನ್ನಲೆಯಲ್ಲಿ ನೊಂದಣಿ, ದಾಖಲಾತಿ ಪರಿಶೀಲನೆ, ಮಾಪ್-ಅಪ್ ಸುತ್ತಿನ ಸೀಟು ಹಂಚಿಕೆ

ಆಯುಕ್ತರು, ಆಯುಷ್ ಇಲಾಖೆ ಇವರು ತಮ್ಮ ಪತ್ರ ದಿನಾಂಕ 30-03-2022 ರಲ್ಲಿ ಭಾರತ ಸರ್ಕಾರದ ಆಯುಷ್ ಮಂತ್ರಾಲಯ ಇವರ ದಿನಾಂಕ 30-03-2022 ರ ಸೂಚನೆಯ ಅನ್ವಯ, ಯುಜಿ ಆಯುಷ್ ಕೋರ್ಸುಗಳ ಪ್ರವೇಶಕ್ಕಾಗಿ NEET UG 2021 ಕನಿಷ್ಟ ಅರ್ಹತೆಯ ಅಂಕಗಳನ್ನು ಪರಷ್ಕರಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಕನಿಷ್ಟ ಅರ್ಹತೆಯ ಅಂಕಗಳನ್ನು ಪರಿಷ್ಕರಿಸಿದ ಹಿನ್ನಲೆಯಲ್ಲಿ 2021ನೇ ಸಾಲಿಗೆ UG AYUSH ಕೋರ್ಸುಗಳಿಗೆ ಅರ್ಹಗೊಳ್ಳುವ ಇಚ್ಛೆಯುಳ್ಳ ಅಭ್ಯರ್ಥಿಗಳು ಮಾತ್ರ ದಿನಾಂಕ **16-04-2022** ರ ಮ. **2.00** ರಿಂದ **18-04-2022** ರ ಮ. 2.00 ರ ವರೆಗೆ ಆನ್‌ಲೈನ್ ನೊಂದಣಿ ಮಾಡಿ ದಿನಾಂಕ **18-04-2022** ರೊಳಗಾಗಿ ನಿಗದಿತ ಶುಲ್ಕವನ್ನು ಪಾವತಿಸಬಹುದಾಗಿದೆ.

ಕನಿಷ್ಟ ಅರ್ಹತೆಯ ಅಂಕಗಳನ್ನು ಪರಿಷ್ಕರಿಸಿದ ಹಿನ್ನಲೆಯಲ್ಲಿ ಈ ಮೇಲಿನ ದಿನಾಂಕಗಳಂದು ನೊಂದಣಿ ಮಾಡಿಕೊಳ್ಳುವ ಅಭ್ಯರ್ಥಿಗಳಿಗೆ ದಾಖಲಾತಿಗಳ ಪರಿಶೀಲನೆಯನ್ನು ದಿನಾಂಕ 19-04-2022 ರಂದು ಬೆ.10.30 ರಿಂದ ಮ.1.00 ರ ವರೆಗೆ ನಡೆಸಲಾಗುವುದು. ಅಭ್ಯರ್ಥಿಗಳು ಎಲ್ಲಾ ಮೂಲ ದಾಖಲೆಗಳೊಂದಿಗೆ ದಾಖಲೆಗಳ ಪರಿಶೀಲನೆಗೆ ಹಾಜರಾಗಬಹುದು.

ಯುಜಿನೀಟ್-2021 ರ ಯುಜಿ ಆಯುಷ್ ಕೋರ್ಸುಗಳಿಗೆ ಕನಿಷ್ಟ ಅರ್ಹತೆಯ ಪರಿಷ್ಕರಿಸಿದ ಅಂಕಗಳ ವಿವರಗಳ ನೋಟಿಸ್ 30-03-2022 ರನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.

ಬಿ) ಮಾಪ್-ಅಪ್ ಸುತ್ತು – ಯುಜಿ ಆಯುಷ್ 2021

ಯುಜಿ ಆಯುಷ್ ಕೋರ್ಸುಗಳಿಗೆ ಮಾಪ್-ಅಪ್ ಸುತ್ತಿನ ಸೀಟು ಹಂಚಿಕೆಯನ್ನು ಲಭ್ಯವಿರುವ ಎಲ್ಲಾ ಆಯುಷ್ ಸೀಟುಗಳಿಗೆ ನಡೆಸಲಾಗುವುದು. ಮೊದಲನೇ ಅಥವಾ ಎರಡನೇ ಸುತ್ತಿನಲ್ಲಿ ಯಾವುದೇ ಆಯುಷ್ ಸೀಟುಗಳನ್ನು ಹಂಚಿಕೆ ಯಾಗದಿರುವ ಅಭ್ಯರ್ಥಿಗಳು ಮಾತ್ರ ಈ ಸುತ್ತಿನಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ. ಕನಿಷ್ಟ ಅರ್ಹತೆಯ ಅಂಕಗಳನ್ನು ಪರಿಷ್ಕರಿಸಿದ ಹಿನ್ನಲೆಯಲ್ಲಿ ದಾಖಲಾತಿ ಪರಿಶೀಲನೆಯ ನಂತರ ಅರ್ಹಗೊಳ್ಳುವ ಅಭ್ಯರ್ಥಿಗಳೂ ಸಹ ಮಾಪ್-ಅಪ್ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಬಹುದಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in

ಸಂಖ್ಯೆ: ಇಡಿ/ಕೆಇಎ/ಪತ್ರಿಕಾ ಪ್ರಕಟಣೆ/2021 ದಿನಾಂಕ: 13–04–2022

## Schedule for UG-AYUSH Mop-up round - 2021

| Sl. No. | Particulars | Details |
|---|---|---|
| 01 | Online Registration only for lowered percentile qualified candidates | 16-04-2022 from 2.00 pm to 18-04-2022 up to 2.00 pm |
| 02 | Last date to pay the fees | 18-04-2022 |
| 03 | Documents verification only to lowered percentile qualified registered candidates | 19-04-2022 – reporting at 9.30 am |
| 04 | Mop-up round – offline seat allotment at KEA, Bangalore (As per norms) **The offline seat allotment will be conducted at KEA, 18th Cross, Malleshwaram, Bengaluru.** | 21-04-2022 – AYURVEDA reporting at 9.30 am (1 to Last rank – UG NEET All India Rank) |
| | | 22-04-2022 – Homoeopathy & Unani reporting at 9.30 am (1 to Last rank – UG NEET All India Rank) |
| | | 23-04-2022 – Yoga and Naturopathy reporting at 9.30 am (1 to Last rank – CET-2021) |
| 05 | Last date for reporting to the allotted colleges | 23-04-2022 5.30 pm (Homeopathy and AYURVEDA) |
| | | 25-04-2022 5.30 pm (Yoga and Naturopathy) |

### Following documents are required to participate in the mop-up round.

a. Candidates have to bring all the original documents listed in the Verification Slip.

b. Verification Slip obtained from KEA.

c. Candidates will not be allowed to participate in the mop-up round counselling without any of the above mentioned documents

d. The candidates have to compulsorily pay the prescribed fees in the form of demand draft drawn in favour of "The Executive Director, KEA" payable at Bangalore. Candidates can bring multiple demand drafts for different denominations according to their willingness for selection of available seat.

Eg: (1) For Rs.25,500/- Government Colleges.
(2) For Rs.20,000/- (1 + 2) = 45,500/- Private Aided Colleges.
(3) For Rs.15,500/- (1 + 2 + 3) = 60,500/- Private Colleges.
(4) For Rs.1,40,000/- (1 + 2 + 3 +4)=2,00,500/- GMP Seats – (AIQ)

e. In case of cancellation after allotment in Mop-up round, entire fees paid will be forfeited and the candidate will be liable to pay prescribed penalty. The candidate will not be eligible for any allotment through centralised counselling in Karnataka in future.

f. Only the candidate has to participate in the mop-up round counselling, no one can represent the candidate.

Executive Director.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

No. ED/KEA/Mop-up/UG-AYUSH/2021 Date: 13-04-2022

2021 ರ ಯುಜಿ ಆಯುಷ್ ಸೀಟುಗಳ **MOP-UP ROUND** - ಸೂಚನೆಗಳು

ಅರ್ಹ ಅಭ್ಯರ್ಥಿಗಳು ಯುಜಿ ಆಯುಷ್ **MOP-UP ROUND** ಸುತ್ತಿನಲ್ಲಿ ಭಾಗವಹಿಸಲು ಎಲ್ಲಾ ಮೂಲ ದಾಖಲೆಗಳು ಹಾಗು ಡಿಮ್ಯಾಂಡ್ ಡ್ರಾಫ್ಟ್ ಗಳೊಂದಿಗೆ ಭಾಗವಹಿಸಬಹುದು. ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ವಿವಿಧ ಪ್ರವರ್ಗಗಳಲ್ಲಿ ಉಳಿದಿರುವ ಯುಜಿ ಆಯುಷ್ ಸೀಟುಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಕಟಿಸಲಾಗುವುದು. ಯುಜಿ ಆಯುಷ್ ಸೀಟುಗಳ **MOP-UP ROUND** ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೊದಲು ಅಭ್ಯರ್ಥಿಗಳು ಸೀಟುಗಳ ಲಭ್ಯತೆಯನ್ನು ನೋಡಿ ಭಾಗವಹಿಸಬಹುದಾಗಿದೆ. ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ಯಾವುದಾದರು ಸೀಟುಗಳು ರದ್ದುಗೊಂಡರೆ ಅಂತಹ ರದ್ದುಗೊಳ್ಳುವ ಸೀಟುಗಳನ್ನು ಆಯಾ ಪ್ರವರ್ಗದಲ್ಲಿಯೇ ಹಂಚಿಕೆಗೆ ಪರಿಗಣಿಸಲಾಗುವುದು. ಯುಜಿ ಆಯುಷ್ ಸೀಟುಗಳನ್ನು ಆಯಾ ವರ್ಗದ ಅಭ್ಯರ್ಥಿಗಳಿಗೆ ಮಾತ್ರ ಮೊದಲು ಹಂಚಿಕೆ ಮಾಡಲಾಗುವುದು. ಅಭ್ಯರ್ಥಿಗಳು **MOP-UP ROUND** ನಲ್ಲಿ **ಭಾಗವಹಿಸಲು** ಖುದ್ದಾಗಿ ಹಾಜರಿರಬೇಕು. ಅಂದರೆ, ಅವರ ಪರವಾಗಿ ಬೇರೆ ಯಾರೂ ಹಾಜರಾಗುವಂತಿಲ್ಲ ಅಥವಾ ಅವರ ಪರವಾಗಿ ಬಂದಿರುವ ಯಾರೇ ಪ್ರತಿನಿಧಿಗಳಿಗೆ ಹಾಜರಾಗಲು ಅವಕಾಶ ನೀಡುವುದಿಲ್ಲ. ಯುಜಿ ಆಯುಷ್ **MOP-UP ROUND** ಸುತ್ತಿನಲ್ಲಿ ಸೀಟುಗಳು ಮುಗಿದು ಹೋದಲ್ಲಿ ಕೌನ್ಸಿಲಿಂಗ್ ಅನ್ನು ನಿಲ್ಲಿಸಲಾಗುವುದು. ಅಭ್ಯರ್ಥಿಗಳು ಕಡ್ಡಾಯವಾಗಿ ನಿಗದಿತ ಶುಲ್ಕವನ್ನು ಡಿಮ್ಯಾಂಡ್ ಡ್ರಾಫ್ಟ್ ಮುಖಾಂತರ ಪಾವತಿಸಬೇಕು. ಡಿಮ್ಯಾಂಡ್ ಡ್ರಾಫ್ಟ್ ಅನ್ನು "The Executive Director, KEA" ಇವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಪಡೆದಿರಬೇಕು. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಡಿಮ್ಯಾಂಡ್ ಡ್ರಾಫ್ಟ್ ಅನ್ನು ಸಲ್ಲಿಸಬಹುದು.

ಮುಖ್ಯವಾದುದು: ಬ್ಯಾಂಕ್ ರಜಾದಿನಗಳನ್ನು ಅಥವಾ ಬ್ಯಾಂಕುಗಳ ವ್ಯವಹಾರದ ದಿನಗಳನ್ನು ಗಮನದಲ್ಲಿಟ್ಟುಕೊಂಡು ಅಭ್ಯರ್ಥಿಗಳು ಮುಂಚಿತವಾಗಿಯೇ ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ತೆಗೆದಿಟ್ಟುಕೊಳ್ಳಲು ಸೂಚಿಸಿದೆ. ಡಿಮ್ಯಾಂಡ್ ಡ್ರಾಫ್ಟ್ ಇಲ್ಲದೇ ಇರುವ ಅಭ್ಯರ್ಥಿಗಳನ್ನು ಸೀಟು ಆಯ್ಕೆ ಮಾಡಲು ಅನುಮತಿಸಲಾಗುವುದಿಲ್ಲ. ನಿಗದಿತ ಶುಲ್ಕವನ್ನು ಚೆಕ್ ಮುಖಾಂತರ ಅಥವಾ ನಗದು ರೂಪದಲ್ಲಿ ಅಥವಾ ಆನ್‌ಲೈನ್ ಮುಖಾಂತರ ಪಾವತಿಸುವಂತಿಲ್ಲ.

ಕಾರ್ಯನಿರ್ವಾಹಕ ನಿರ್ದೇಶಕರು

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in